## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಚಂದ್ರಮೌಳಿ, ಕಾರ್ಯನಿರ್ವಾಹಕ ಅಧಿಕಾರಿ, ಪಾಂಡವಪುರ ತಾಪಂ, ಮಂಡ್ಯ ಜಿಲ್ಲೆ ಮತ್ತಿತರರ ವಿರುದ್ಧ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಂತೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಆದೇಶ.

ಓದಲಾಗಿದೆ:-ಮಾನ್ಯ ಉಪ ಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿ ಸಲ್ಲಿಸಿರುವ ವರದಿ ಸಂಖ್ಯೆ: ಕಂಪ್ಲೆಂಟ್/ ಉಪಲೋಕ್/ಎಂವೈಎಸ್-8647/2015, ದಿ:16-03-2017.

-000-

ಪ್ರಸ್ತಾವನೆ:

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ:10-04-2017 ಅ.ಸ.ಪತ್ರದಲ್ಲಿ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರ ದಿನಾಂಕ: ದಿ:16-03-2017ರ ವರದಿ ಮತ್ತು ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸುತ್ತಾ, ಸರ್ಕಾರದ ನಿರ್ಣಯವನ್ನು ಲೋಕಾಯುಕ್ತ ಕಛೇರಿಗೆ ಸಲ್ಲಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಕೆ.ಎನ್. ನಾಗೇಶ್ ಬಿನ್ ಲೇಟ್ ನರಸಿಂಹೇಗೌಡ, ಹೊಸಕನ್ನಂಬಾಡಿ ಗ್ರಾಮ, ಚಿನಕುರಳಿ ಹೋಬಳಿ, ಪಾಂಡವಪುರ ತಾ: ಮಂಡ್ಯ ಜಿಲ್ಲೆ ಇವರು ತಮ್ಮ ದೂರಿನಲ್ಲಿ ಕೆಳಗೆ ವಿವರಿಸಿರುವ (3) ಜನ ಅಧಿಕಾರಿ/ನೌಕರರ ವಿರುದ್ಧ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದೆ ಎಂದು ವರದಿಸಿರುತ್ತಾರೆ.

| ಕ್ರ.ಸಂ | ಎದುರುದಾರರ ಹೆಸರು ಮತ್ತು ವಿವರ | ಎದುರುದಾರರ ಸಂಖ್ಯೆ |
|---|---|---|
| 1 | ಶ್ರೀ ಚಂದ್ರಮೌಳಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕುಪಂಚಾಯತಿ, ಪಾಂಡವಪುರ ತಾ:ಮಂಡ್ಯ ಜಿಲ್ಲೆ | 1 |
| 2 | ಶ್ರೀಮತಿ ಶಶಿಕಲಾ, ಪಿಡಿಒ, ಕಟ್ಟೇರಿ ಗ್ರಾಪಂ, ಪಾಂಡವಪುರ ತಾ: ಮಂಡ್ಯ ಜಿಲ್ಲೆ | 2 |
| 3 | ಶ್ರೀ ಸೋಮಶೇಖರ್, ಬಿಲ್ ಕಲೆಕ್ಟರ್, ಕಟ್ಟೇರಿ ಗ್ರಾಪಂ, ಪಾಂಡವಪುರ ತಾ: ಮಂಡ್ಯ ಜಿಲ್ಲೆ | 3 |

ದೂರಿನ ಸಂಕ್ಷಿಪ್ತ ವಿವರಣೆ:-

ದೂರುದಾರರು ತಮ್ಮ ದೂರಿನಲ್ಲಿ ತಮಗೆ ಸೇರಿದ ಸಂಖ್ಯೆ:72ರ ಅಳತೆ 53/2 ಮತ್ತು ನಿವೇಶನ ಸಂಖ್ಯೆ:71ರ ಅಳತೆ 53/1ರ ನಿವೇಶನಗಳನ್ನು ಅವರ ಹೆಸರಿಗೆ ಖಾತೆ ಮಾಡಿಕೊಡುವಂತೆ ದಿನಾಂಕ 18-09-2014ರಂದು ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿರುತ್ತಾರೆಂದು, ದಿನಾಂಕ 02-12-2014ರಂದು ಸ್ಥಳ ಪರಿಶೀಲನೆ ಮಾಡಿ ನಿವೇಶನ ಸಂಖ್ಯೆ:71ರ ಅಳತೆ 53/1ರ ಜಾಗದಲ್ಲಿ 3ನೇ ಎದುರುದಾರರಾದ ಶ್ರೀ ಸೋಮಶೇಖರ್ ಇವರು ಮನೆಯನ್ನು ನಿರ್ಮಿಸಿದ್ದು, ಉಳಿದಂತೆ ಸದರಿಯವರ ನಿವೇಶನದ ಜಾಗವನ್ನು ಆಕ್ರಮಿಸಿಕೊಂಡು ಶೌಚಾಲಯವನ್ನು ನಿರ್ಮಿಸಿಕೊಂಡು ತೆರವುಗೊಳಸದೇ,ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸದೇ ಉದ್ದಟತನದಿಂದ ವರ್ತಿಸುತ್ತಿದ್ದಾರೆಂದು ಆಪಾದಿಸಿರುತ್ತಾರೆ. ಮುಂದುವರೆದು ಸದರಿ ಪ್ರಕರಣದಲ್ಲಿ ದೂರುದಾರರ ತಾಯಿಯ ಹೆಸರಿಗೆ ಮಂಜೂರಾಗಿರುವ ಆಶ್ರಯ ಮನೆಯ ನಿವೇಶನವು 39*39 ಅಳತೆಯಿದ್ದು,

ದೂರುದಾರರ ಜಾಗದಲ್ಲಿ ಅಕ್ರಮವಾಗಿ ಕಟ್ಟಿರುವ ಶೌಚಾಲಯವನ್ನು ತೆರವುಗೊಳಸುವಂತೆ ಕೋರಿದ್ದರೂ ದುರುದ್ದೇಶದಿಂದ ನಿವೇಶನಗಳ ಚೆಕ್ಕುಬಂದಿ ಮತ್ತು ಉದ್ದ ಅಗಲದ ಅಳತೆಯನ್ನು ಬದಲಾವಣೆ ಮಾಡಿ ಉದ್ಧಟತನದಿಂದ ವರ್ತಿಸಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡಿದೆ ಎಂದು ವರದಿಸಿರುತ್ತಾರೆ.

<u>ಕಡತ ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಕಂಡು ಬರುವ ಅಂಶಗಳೇನೆಂದರೆ</u>:- ದೂರುದಾರರ ದೂರಿಗೆ ಸಂಬಂಧಪಟ್ಟಂತೆ 1 ರಿಂದ 3ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ದೂರುದಾರರು ಸಲ್ಲಿಸಿರುವ ದೂರು ಮತ್ತು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ, ಎರಡು ಒಂದಕ್ಕೆ ಒಂದು ತಾಳೆ ಇರುವುದಿಲ್ಲ. ಆದ್ದರಿಂದ ದೂರುದಾರರ ದೂರಿಗೆ ಸಂಬಂಧಪಟ್ಟಂತೆ ಕೂಲಂಕಷವಾಗಿ ತನಿಖೆ ನಡೆಸಿ ವಿವರವಾದ ವರದಿಯನ್ನು ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ಇವರಿಗೆ ತಿಳಿಸಿದೆ ಎಂದು ವರದಿಸಿರುತ್ತಾರೆ.

- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ಇವರು ದಿನಾಂಕ 04-01-2017ರ ಪತ್ರದ ರೀತ್ಯಾ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ದೂರುದಾರರಾದ ಶ್ರೀ ನಾಗೇಶ್ ಇವರು ಸಲ್ಲಿಸಿರುವ ಕ್ರ.ಸಂ.72 ಆಸ್ತಿ ಸಂಖ್ಯೆ:53/2ಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ಒದಗಿಸಿಕೊಟ್ಟಲ್ಲಿ ಗ್ರಾಮ ಪಂಚಾಯತಿಯು ಶ್ರೀ ನಾಗೇಶ್ ಇವರಿಗೆ ಖಾತೆ ಮಾಡಿಕೊಡಲು ಸಿದ್ಧವಿರುತ್ತದೆಂದು ತಿಳಿಸಿರುತ್ತಾರೆ. ಇದು ಅಲ್ಲದೇ ಆಸ್ತಿ ನಂ.53/1 ಮತ್ತು 53/3 ದೂರುದಾರರ ಆಸ್ತಿಗಳಾಗಿದ್ದು, ಗ್ರಾಮ ಠಾಣಾ ಜಾಗವನ್ನು ಒತ್ತುವರಿ ಮಾಡಿ ನಿರ್ಮಿಸಿರುವುದು ಕಂಡುಬರುತ್ತದೆ. ಹಾಗೂ ದೂರುದಾರರಾದ ಶ್ರೀ ಕೆ.ಎನ್. ನಾಗೇಶ್ ಇವರ ಆಸ್ತಿಯ ಪಶ್ಚಿಮ ಭಾಗಕ್ಕೆ ಇರುವ ಗ್ರಾಮ ಠಾಣಾಖಾಲಿ ನಿವೇಶನ ಪೂ-ಪ24, ಉ-ದ 40 1/2 ಅಡಿ ಜಾಗವನ್ನು ಒತ್ತುವರಿಯಾಗಿ ಮಾಡಿಕೊಂಡು, ಹೊಸದಾಗಿ ಆರ್.ಸಿ.ಸಿ. ಮನೆ ನಿರ್ಮಿಸಿರುವುದು ಕಂಡುಬರುತ್ತದೆ ಎಂದು ವರದಿಸಿರುತ್ತಾರೆ.
- ಮುಂದುವರೆದು, ದೂರುದಾರರು ದೂರಿನಲ್ಲಿ ನಮೂದಿಸಿರುವಂತೆ ಕಟ್ಟೇರಿ ಗ್ರಾಮ ಪಂಚಾಯತಿಯ ಹಾಲಿ ಬಿಲ್ ಕಲೆಕ್ಟರ್ ಶ್ರೀ ಸೋಮಶೇಖರ್ ತಂದೆಯಾದ ಶ್ರೀ ನಿಂಗೇಗೌಡ ಬಿನ್ ಕಾಳೇಗೌಡ ಇವರ ಹೆಸರಿನಲ್ಲಿರುವ ಖಾತೆ ನಂ.25/1ರ ಗ್ರಾಮಪಂಚಾಯತಿ ಆಸ್ತಿ ವಹಿಯಲ್ಲಿ 39*39 ಅಡಿ ಎಂದಿದ್ದು, ಅವರು ಉ-ದ 69 ಮತ್ತು ಪೂ-ಪ 39 ಅಡಿ ಜಾಗದಲ್ಲಿ ಮನೆ ನಿರ್ಮಿಸಿದ್ದು, ಉ-ದ 30ಅಡಿ ಒತ್ತುವರಿಯಾಗಿರುವುದಲ್ಲದೇ ಸದರಿಯವರು ನಿರ್ಮಿಸಿರುವ ಶೌಚಾಲಯವು ಕೂಡ ಒತ್ತುವರಿಯಾಗಿರುತ್ತದೆಂದು ವರದಿಸಿರುತ್ತಾರೆ.
- ದೂರುದಾರರು ಸಲ್ಲಿಸಿರುವ ದೂರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ದೂರುದಾರರು ಹಾಗೂ ಹಾಲಿ ಬಿಲ್ ಕಲೆಕ್ಟರ್ (3ನೇ ಎದುರುದಾರರು) ಇವರುಗಳು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿರುವುದು ಕಂಡುಬರುತ್ತದೆ. ಸದರಿ ಒತ್ತುವರಿಯನ್ನು ಗುರುತಿಸಿ ತೆರವುಗೊಳಸಬೇಕಾಗಿದ್ದು, ಎದುರುದಾರರುಗಳ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ, ಇದುವರೆವಿಗೂ ಸದರಿ ಒತ್ತುವರಿಯನ್ನು ತೆರವುಗೊಳಸಿರುವುದು ಕಂಡುಬರುವುದಿಲ್ಲ ಎಂದು ವರದಿಸಿರುತ್ತಾರೆ.

..3

ಆದ್ದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಪಂ, ಮಂಡ್ಯ ಇವರು ಸಲ್ಲಿಸಿರುವ ವರದಿಯನ್ನು 1ರಿಂದ 3ನೇ ಎದುರುದಾರರುಗಳಗೆ, ದೂರುದಾರರಿಗೆ ಹಾಗೂ ಹಾಲಿ ಸದರಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 4ನೇ ಎದುರುದಾರರಾದ ಶ್ರೀಪಿ.ಸಿ.ಕುಮಾರ್,ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಟ್ಟೇರಿ ಗ್ರಾಪಂ, ಪಾಂಡವಪುರ ತಾ:ಮಂಡ್ಯ ಜಿಲ್ಲೆ ಮತ್ತು 5ನೇ ಎದುರುದಾರರಾದ ಶ್ರೀ ಮಂಜುನಾಥಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತಿ, ಪಾಂಡವಪುರ ತಾ:ಮಂಡ್ಯ ಜಿಲ್ಲೆ ಅಧಿಕಾರಿಗಳನ್ನು ಸೇರ್ಪಡೆ ಮಾಡಿ ನಂತರ 1 ರಿಂದ 5ನೇ ಎದುರುದಾರರುಗಳಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ವರದಿಸಿರುತ್ತಾರೆ.

| ಕ್ರ.ಸಂ | ಎದುರುದಾರರ ಹೆಸರು ಮತ್ತು ವಿವರ | ಎದುರುದಾರರ ಸಂಖ್ಯೆ |
|---|---|---|
| 4 | ಹಾಲಿ ಕಾರ್ಯನಿರ್ವಾಹಕ ಅಧಿಕಾರಿ, ಕಟ್ಟೇರಿ ಗ್ರಾಪಂ, ಪಾಂಡವಪುರ ತಾ:ಮಂಡ್ಯ ಜಿಲ್ಲೆ | 4 |
| 5 | ಹಾಲಿ ಪಂಚಾಯಿತಿ ಅಭಿವೃದ್ಧಿಅಧಿಕಾರಿ ಕಟ್ಟೇರಿ ಗ್ರಾಪಂ,ಪಾಂಡವಪುರ ತಾ: ಮಂಡ್ಯ ಜಿಲ್ಲೆ | 5 |

- 2ನೇ ಮತ್ತು 4ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರಿನ ಆಪಾದನೆಗಳನ್ನು ನಿರಾಕರಿಸಿದ್ದು, ಅವರ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ. 1, 3 ಮತ್ತು 5ನೇ ಎದುರುದಾರರುಗಳು ಈ ಕಛೇರಿಯಿಂದ ಕಳುಹಿಸಲಾದ ಪತ್ರವನ್ನು ಸ್ವೀಕರಿಸಿದರೂ ಸಹ, ಇದುವರೆವಿಗೂ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ 1, 3 ಮತ್ತು 5ನೇ ಎದುರುದಾರರಿಗೆ ದೂರುದಾರರ ದೂರಿನ ಮೇಲೆ ಏನು ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಗೌರವಾನ್ವಿತ ಉಪಲೋಕಾಯುಕ್ತರ ಕಂಡಿಕೆ 53ರ ಆದೇಶದ ಮೇರೆಗೆ 1, 3 ಮತ್ತು 5ನೇ ಎದುರುದಾರರ ಆಕ್ಷೇಪಣೆಗಳೇನು ಇಲ್ಲವೆಂದು ಪರಿಗಣಿಸಿ, ಕಡತವನ್ನು ಅಂತಿಮ ಪರಿಶೋಧನೆ ಟಿಪ್ಪಣೆಗಾಗಿ post ಮಾಡಲಾಗಿದೆ ಎಂದು ವರದಿಸಿರುತ್ತಾರೆ. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ, 1ರಿಂದ 5ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- ದೂರುದಾರರಾದ ಶ್ರೀ ನಾಗೇಶ್ ರವರು ಸಲ್ಲಿಸಿರುವ ಕ್ರ.ಸಂ.72 ಆಸ್ತಿ ಸಂಖ್ಯೆ:53/2ಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ಒದಗಿಸಿಕೊಟ್ಟಲ್ಲಿ ಗ್ರಾಮ ಪಂಚಾಯಿತಿಯ ಶ್ರೀ ನಾಗೇಶ್ ರವರಿಗೆ ಖಾತೆ ಮಾಡಿಕೊಡಲು ಸಿದ್ಧವಿರುತ್ತದೆಂದು ವರದಿಸಿರುತ್ತಾರೆ.
- ಆಸ್ತಿ ನಂ.53/1 ಮತ್ತು 53/3 ದೂರುದಾರರ ಆಸ್ತಿಗಳಾಗಿದ್ದು, ದೂರುದಾರರಾದ ಶ್ರೀ ಕೆ.ಎನ್.ನಾಗೇಶ್‌ರವರು ಗ್ರಾಮ ಠಾಣಾ ಜಾಗವನ್ನು ಒತ್ತುವರಿ ಮಾಡಿಕೊಂಡು ನಿರ್ಮಿಸಿರುತ್ತಾರೆ ಹಾಗೂ ಇದು ಅಲ್ಲದೇ, ಅವರ ಆಸ್ತಿಯ ಪಶ್ಚಿಮ ಭಾಗಕ್ಕೆ ಇರುವ ಗ್ರಾಮ ಠಾಣಾ ಖಾಲಿ ನಿವೇಶನ ಪೂ-ಪ 24, ಉ-ದ 40 1/2 ಅಡಿ ಜಾಗವನ್ನು ಸಹ ಒತ್ತುವರಿಯಾಗಿ ಮಾಡಿಕೊಂಡು, ಹೊಸದಾಗಿ ಆರ್.ಸಿ.ಸಿ. ಮನೆ ನಿರ್ಮಿಸಿರುವುದು ಕಂಡುಬರುತ್ತದೆ. ಹಾಗೂ ಸದರಿ ಒತ್ತುವರಿಯನ್ನು ಇದುವರೆವಿಗೂ ತೆರವುಗೊಳಸದೆ ಇರುವುದು ಕಂಡುಬರುತ್ತದೆ.
- ದೂರುದಾರರು ದೂರಿನಲ್ಲಿ ನಮೂದಿಸಿರುವಂತೆ, ಕಟ್ಟೇರಿ ಗ್ರಾಪಂ.ಯ ಹಾಲಿ ಬಿಲ್ ಕಲೆಕ್ಟರ್ ಶ್ರೀ ಸೋಮಶೇಖರ್ (3ನೇ ಎದುರುದಾರರು) ಇವರ ತಂದೆಯಾದ ಶ್ರೀ ನಿಂಗೇಗೌಡ ಬಿನ್ ಕಾಳೇಗೌಡರವರ ಹೆಸರಿನಲ್ಲಿರುವ ಖಾತೆ ನಂ.25/1ರ ಗ್ರಾಮ ಪಂಚಾಯಿತಿ ಆಸ್ತಿ ವಹಿಯಲ್ಲಿ 39*39 ಅಡಿ ಎಂದಿದ್ದು, ಅವರು ಉ-ದ 69 ಮತ್ತು ಪೂ-ಪ 39 ಅಡಿ ಜಾಗದಲ್ಲಿ ಮನೆ ನಿರ್ಮಿಸಿದ್ದು, ಉ-ದ 30 ಅಡಿ ಒತ್ತುವರಿ ಮಾಡಿಕೊಂಡಿರುವುದಲ್ಲದೇ, ಶೌಚಾಲಯವನ್ನು ಸಹಾ ಅಕ್ರಮವಾಗಿ ಒತ್ತುವರಿ ಮಾಡಿಕೊಂಡ ಜಾಗದಲ್ಲಿ ನಿರ್ಮಿಸುವ ಮೂಲಕ ಕರ್ತವ್ಯಲೋಪವೆಸಗಿರುತ್ತಾರೆ ಎಂದು ವರದಿಸಿರುತ್ತಾರೆ.

..4

- 2 ಮತ್ತು 4ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದು, ಗ್ರಾಮದಲ್ಲಿನ ಆಗುಹೋಗುಗಳ ಬಗ್ಗೆ ಅಕ್ರಮ ಒತ್ತುವರಿಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಆಗ್ಗಿಂದಾಗ್ಗೆ ಕಾನೂನು ರೀತ್ಯಾ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುವುದು 2 ಮತ್ತು 4ನೇ ಎದುರುದಾರರುಗಳ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ, 2 ಮತ್ತು 4ನೇ ಎದುರುದಾರರುಗಳು ಸದರಿ ಅಕ್ರಮ ಒತ್ತುವರಿಯ ಬಗ್ಗೆ ಇದುವರೆವಿಗೂ ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ವರದಿಸಿರುತ್ತಾರೆ.
- 1 ಮತ್ತು 5ನೇ ಎದುರುದಾರರುಗಳು ದೂರುದಾರರ ದೂರಿನ ಬಗ್ಗೆ ಕ್ರಮ ವಹಿಸುವಂತೆ 2 ಮತ್ತು 4ನೇ ಎದುರುದಾರರುಗಳಿಗೆ ಸೂಚಿಸುವುದು ಹಾಗೂ ಸರ್ಕಾರಿ ಜಾಗವನ್ನು ಯಾರು ಅತಿಕ್ರಮಣ ಮಾಡದಂತೆ ಕಾನೂನು ರೀತ್ಯಾ ಸೂಕ್ತ ಕ್ರಮ ವಹಿಸುವುದು 1 ಮತ್ತು 5ನೇ ಎದುರುದಾರರುಗಳ ಕರ್ತವ್ಯವಾಗಿರುತ್ತದೆ. ಆದರೆ, 1 ಮತ್ತು 5ನೇ ಎದುರುದಾರರು ಸದರಿ ಒತ್ತುವರಿಯನ್ನು ತೆರವುಗೊಳಿಸದೇ ಇರುವ ಬಗ್ಗೆ ಇದುವರೆವಿಗೂ ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆಂದು ವರದಿಸಿರುತ್ತಾರೆ.
- ದೂರುದಾರರು ದೂರು ಹಾಗೂ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ 1, 2, 4 ಮತ್ತು 5ನೇ ಎದುರುದಾರರುಗಳು ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 1, 2, 4 ಮತ್ತು 5ನೇ ಎದುರುದಾರರುಗಳು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ ಎಂದು ವರದಿಸಿರುತ್ತಾರೆ.
- ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ 1, 2, 4 ಮತ್ತು 5ನೇ ಎದುರುದಾರರುಗಳು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರ ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ / ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ 1, 2, 4 ಮತ್ತು 5ನೇ ಎದುರುದಾರರುಗಳು ವಿರುದ್ಧ ಶಿಸ್ತು ನಡವಳಿಕೆ ಹೂಡಲು ಹಾಗೂ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು, 1957ರ ನಿಯಮ 14(ಎ)ರನ್ವಯ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಉಪ ಲೋಕಾಯುಕ್ತರು-2 ಇವರಿಗೆ ಒಪ್ಪಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.
- 3ನೇ ಎದುರುದಾರರಾದ ಶ್ರೀ ಸೋಮಶೇಖರ್, ಬಿಲ್ ಕಲೆಕ್ಟರ್ ಇವರು ಸರ್ಕರಿ ನೌಕರರಾಗಿರುವುದಿಲ್ಲ. ಈ ಸಂಬಂಧ ಸದರಿಯವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾದ್ಯವಿಲ್ಲದೇ ಇರುವ ಕಾರಣ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ಗ್ರಾಮ ಪಂಚಾಯಿತಿ ಶಾಖೆಗೆ ದಿನಾಂಕ:31-07-2017 ರ ಮೂಲಕ ವರ್ಗಾಹಿಸಲಾಗಿದೆ.

ಸದರಿ ಪ್ರಕರಣವನ್ನು ಪರಿಶೀಲಿಸಲಾಗಿ 1ನೇ ಎದುರುದಾರರಾದ ಶ್ರೀ ಚಂದ್ರಮೌಳಿ, ಕಾರ್ಯನಿರ್ವಾಹಕ ಅಧಿಕಾರಿ, ಪಾಂಡವಪುರ ತಾಪಂ, ಮಂಡ್ಯ ಜಿಲ್ಲೆ 2ನೇ ಎದುರುದಾರರಾದ ಶ್ರೀಮತಿ ಶಶಿಕಲಾ, ಪಿಡಿಓ, ಕಟ್ಟೇರಿ ಗ್ರಾಪಂ,ಪಾಂಡವಪುರ ತಾ:ಮಂಡ್ಯ ಜಿಲ್ಲೆ, 4ನೇ ಎದುರುದಾರರಾದ ಶ್ರೀ ಪಿ.ಸಿ.ಕುಮಾರ್.ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಟ್ಟೇರಿ ಗ್ರಾಪಂ, ಪಾಂಡವಪುರ ತಾ: ಮಂಡ್ಯ

..5

ಜಿಲ್ಲೆ ಮತ್ತು 5ನೇ ಎದುರುದಾರರಾದ ಶ್ರೀ ಮಂಜುನಾಥಸ್ವಾಮಿ ಕಾರ್ಯನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯತಿ ಪಾಂಡವಪುರ ತಾ: ಮಂಡ್ಯ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ರ (i),(ii) ಮತ್ತು (iii) ಅಡಿಯಲ್ಲಿ ದುರ್ನಡತೆ ಎಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಮಾಡಿರುವ ಶಿಫಾರಸ್ಸಿನ ಅನ್ವಯ, ಆಪಾದಿತ ಅಧಿಕಾರಿಯ ವಿರುದ್ಧ ಕರ್ತವ್ಯಲೋಪದ ಕುರಿತು ಶಿಸ್ತುಕ್ರಮ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮಗಳು, 1957ರ ನಿಯಮ-14(ಎ) ರಡಿಯಲ್ಲಿ 1, 2, 4 ಮತ್ತು 5ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಸದರಿ ನಿಯಮಗಳ ನಿಯಮ-14(ಎ) ರಡಿಯಲ್ಲಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ-02, ಇವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 108 ವಿಸೇಬಿ 2017 ಬೆಂಗಳೂರು ದಿನಾಂಕ:31-07-2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ 1ನೇ ಎದುರುದಾರರಾದ ಶ್ರೀ ಚಂದ್ರಮೌಳಿ, ಕಾರ್ಯನಿರ್ವಾಹಕ ಅಧಿಕಾರಿ, ಪಾಂಡವಪುರ ತಾಪಂ, ಮಂಡ್ಯ ಜಿಲ್ಲೆ 2ನೇ ಎದುರುದಾರರಾದ ಶ್ರೀಮತಿ ಶಶಿಕಲಾ, ಪಿಡಿಓ, ಕಟ್ಟೇರಿ ಗ್ರಾಪಂ,ಪಾಂಡವಪುರ ತಾ:ಮಂಡ್ಯ ಜಿಲ್ಲೆ, 4ನೇ ಎದುರುದಾರರಾದ ಶ್ರೀಪಿ.ಸಿ.ಕುಮಾರ್.ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಟ್ಟೇರಿ ಗ್ರಾಪಂ, ಪಾಂಡವಪುರ ತಾ:ಮಂಡ್ಯ ಜಿಲ್ಲೆ ಮತ್ತು 5ನೇ ಎದುರುದಾರರಾದ ಶ್ರೀ ಮಂಜುನಾಥಸ್ವಾಮಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆ ಇವರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪ ಲೋಕಾಯುಕ್ತ-02, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

31/7/17
(ಡಿವಸ್ ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,
1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್, ಮಂಡ್ಯ.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ,ಬಹುಮಹಡಿ ಕಟ್ಟಡ, ಬೆಂಗಳೂರು-01

ಪ್ರತಿ ಮಾಹಿತಿಗಾಗಿ:
1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.